**2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ–315/2022**

ಪಿ.ಡಬ್ಲ್ಯೂಃ– 3
ಸಿ.ಡಬ್ಲ್ಯೂಃ– 5

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಸುಧಾ |
| ಗಂಡನ ಹೆಸರುಃ | : | ಸುರೇಶ |
| ವಯಸ್ಸುಃ | : | 35 ವರ್ಷ |
| ವೃತ್ತಿಃ | : | ವ್ಯವಸಾಯ |
| ವಾಸಃ | : | ಅನುಗವಳ್ಳಿ ಗ್ರಾಮ. |

**ದಿನಾಂಕಃ 16–07–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೃತ ಚೈತ್ರ ನನ್ನ ತಂಗಿ. 1 ನೇ ಆರೋಪಿ ಮೃತಳ ಗಂಡ. 2 ನೇ ಆರೋಪಿ 1 ನೇ ಆರೋಪಿಯ ಅಣ್ಣ. 3 ನೇ ಆರೋಪಿ 1 ನೇ ಆರೋಪಿಯ ತಂದೆ. ನಮ್ಮ ತಾಯಿ ತಂದೆಗೆ ನನ್ನನ್ನು ಸೇರಿ ಒಟ್ಟು 5 ಜನ ಮಕ್ಕಳು. ಮೃತಳು ಕೊನೆಯ ಮಗಳು. ಘಟನೆಗಿಂತ 9 ವರ್ಷಗಳ ಹಿಂದೆ ಮೃತಳನ್ನು 1 ನೇ ಆರೋಪಿಗೆ ಮದುವೆ ಮಾಡಿ ಕೊಡಲಾಗಿತ್ತು. ಮದುವೆಯ ಬಳಿಕ ಆರೋಪಿತರು ಹಾಗೂ ಮೃತಳು ಸ್ವಲ್ಪ ದಿನ ಚೆನ್ನಾಗಿ ವಾಸವಾಗಿದ್ದರು. ನಂತರ ಆರೋಪಿತರು ನನ್ನ ತಂಗಿಗೆ ವರದಕ್ಷಿಣೆ ಕಿರುಕುಳ ನೀಡಲು ಪ್ರಾರಂಭಿಸಿದರು. ಸದರಿ ಸಂಗತಿಯನ್ನು ಮೃತಳು ನನಗೆ, ನನ್ನ ತಾಯಿ ಚಾಸಾ–1 ರವರಿಗೆ ಹೇಳುತ್ತಿದ್ದಳು. ಕಾರಣ

ನನ್ನ ತಾಯಿ ಚಾಸಾ-1 ರವರು 1 ನೇ ಆರೋಪಿಗೆ ಒಂದು ಲಕ್ಷ ರೂ. ನಗದು ಹಣ ಹಾಗೂ ವಡವೆಯನ್ನು ಸಹ ಕೊಟ್ಟಿದ್ದರು. ಆ ರೀತಿ ಮತ್ತೆ ವರದಕ್ಷಿಣೆಯನ್ನು ನೀಡಿದ ಬಳಿಕ ಸ್ವಲ್ಪ ದಿನ ಚೆನ್ನಾಗಿ ಸಂಸಾರ ನಡೆಸಿಕೊಂಡಿದ್ದರು, ಆದರೆ ಮತ್ತೆ ನನ್ನ ತಂಗಿಗೆ ಆರೋಪಿತರು ತೊಂದರೆ ಕೊಡಲು ಪ್ರಾರಂಭಿಸಿದರು. ಕಾರಣ ಆರೋಪಿತರಿಗೆ ನಾವು ಬುದ್ದಿವಾದ ಹೇಳಿದೆವು ಹಾಗೂ ಕೋಡಿಹಳ್ಳಿಯಲ್ಲಿರುವ ನಮ್ಮ ಅಕ್ಕ ಚಾಸಾ-2 ರವರ ಮನೆಯಲ್ಲಿ ಪಂಚಾಯಿತಿಯನ್ನು ಮಾಡಿದ್ದು, ಆ ಸಮಯದಲ್ಲಿ ಚಾಸಾ-1, 3, 6, ನನ್ನ ಅಕ್ಕಂದಿರು ಹಾಗೂ ಭಾವಂದಿರು ಹಾಗೂ ಆರೋಪಿತರು ಸೇರಿದ್ದರು. ಆ ಸಮಯದಲ್ಲಿ ಆರೋಪಿತರಿಗೆ ಬುದ್ದಿವಾದ ಹೇಳಲಾಯಿತು. ಆದರೆ ಆರೋಪಿತರು ಮತ್ತೆ ಮತ್ತೆ ಜಗಳ ಮಾಡುತ್ತಿದ್ದಾರೆಂದು ನನ್ನ ತಂಗಿ ಮಹಾಲಯ ಅಮವಾಸ್ಯೆಗಿಂತ ಸ್ವಲ್ಪ ದಿನ ಮೊದಲು ಕಿತ್ತನಕೆರೆಯಲ್ಲಿರುವ ನನ್ನ ತಾಯಿ ಮನೆಗೆ ಅಂದರೆ ತವರು ಮನೆಗೆ ವಾಪಸ್ ಬಂದಳು. ಬಳಿಕ ನನ್ನ ತಂಗಿ ಹಬ್ಬ ಮಾಡಿಕೊಂಡು ಬರುತ್ತೇನೆ ಎಂದು ಹಬ್ಬದ ದಿನವೇ ಮತ್ತೆ ಗಂಡನ ಮನೆಗೆ ಹೋದಳು. ಸದರಿ ಹಬ್ಬದ ದಿನದಂದು ಅಂದರೆ ಮಹಾಲಯ ಅಮವಾಸ್ಯೆಯ ದಿನದಂದು ನನ್ನ ತಂಗಿಗೆ ಪೂಜೆ ಮಾಡಲು ಬಿಡದೆ ವರದಕ್ಷಿಣೆ ತೆಗೆದುಕೊಂಡು ಬಾ, ಇಲ್ಲದಿದ್ದರೆ ನಿನ್ನನ್ನು ಸಾಯಿಸುತ್ತೇವೆ ಎಂದು ಆರೋಪಿತರು ಹಿಂಸೆ ನೀಡಿರುತ್ತಾರೆ. ಸದರಿ ಸಂಗತಿಯನ್ನು ನಮ್ಮ ದೊಡ್ಡ ಅಕ್ಕಳಾದ ಚಾಸಾ-18 ತೇಜರವರಿಗೆ ದೂರವಾಣಿ ಮೂಲಕ ತಿಳಿಸಿರುತ್ತಾರೆ. ಹಬ್ಬ ಆದ ಮರುದಿನ ಬೆಳಿಗ್ಗೆ 6.00 ಅಥವಾ 6.30 ಕ್ಕೆ 1 ನೇ ಆರೋಪಿ ಚಾಸಾ-1 ಹಾಗೂ ನನ್ನ ಅಕ್ಕಂದಿರಿಗೆ ಫೋನ್ ಮಾಡಿ ತನ್ನ ಹೆಂಡತಿ ಚೈತ್ರ ನೇಣು ಹಾಕಿಕೊಂಡಿದ್ದಾಳೆ ಎಂದು ತಿಳಿಸಿದ್ದು, ಅದಕ್ಕೆ ನಾವು 1 ನೇ ಆರೋಪಿಗೆ ನಾವು

ಬರುವವರೆವಿಗೂ ಅಲ್ಲೇ ಇರಿ ಬರುತ್ತೇವೆಂದು ತಿಳಿಸಿ ನಾವೆಲ್ಲರೂ ಅಲ್ಲಿಗೆ ಹೋದೆವು. ಅಲ್ಲಿಗೆ ಹೋಗಿ ನೋಡಿದಾಗ ಚೈತ್ರ ಅಡುಗೆ ಮನೆಯಲ್ಲಿ ಸೀರೆಯಿಂದ ನೇಣು ಬಿಗಿದ ಸ್ಥಿತಿಯಲ್ಲಿದ್ದು, ನಾವು ನೋಡಿದಾಗ ಆಕೆಯ ಕೆನ್ನೆಯ ಮೇಲೆ ಬರೆಗಳು ಮೂಡಿದ್ದವು. ಆರೋಪಿಗಳು ಯಾರೂ ಮನೆಯಲ್ಲಿ ಇರಲಿಲ್ಲ. ನಂತರ ಪೊಲೀಸರು ಸ್ಥಳಕ್ಕೆ ಬಂದು ಶವವನ್ನು ಹಳೇಬೀಡು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ನನ್ನ ತಂಗಿಯ ಸಾವಿಗೆ ಆರೋಪಿತರೇ ಕಾರಣರಾಗಿರುತ್ತಾರೆ. ಆರೋಪಿತರೇ ಹೊಡೆದು ನನ್ನ ತಂಗಿಯನ್ನು ನೇಣು ಹಾಕಿರುತ್ತಾರೆ. ಆರೋಪಿತರು ವರದಕ್ಷಿಣೆ ಕಿರುಕುಳ ನೀಡಿ ನನ್ನ ತಂಗಿ ಚೈತ್ರಳಿಗೆ ಹೊಡೆದು ನೇಣು ಹಾಕಿ ಸಾಯಿಸಿರುತ್ತಾರೆ.

2. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಿದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ–3 ಮತ್ತು 5 ಕ್ಕೆ ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಸೀರೆಯನ್ನು ನೋಡಿ ಗುರುತಿಸಿರುವುದಿಲ್ಲ. ಸಾಕ್ಷಿಯು ನನ್ನ ತಂಗಿ ನೇಣು ಬಿಗಿದ ಸ್ಥಿತಿಯಲ್ಲಿದ್ದ ಶವವನ್ನು ನೋಡಿದಾಗ ಇದ್ದ ಸೀರೆಯೇ ಬೇರೆ ಹಾಗೂ ನ್ಯಾಯಾಲಯದ ಮುಂದಿರುವ ಸೀರೆಯೇ ಬೇರೆ ಎಂದು ಹೇಳುತ್ತಾರೆ. ಕೃತ್ಯಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಘಟನೆಯಾದ ಮೂರನೇ ದಿನಕ್ಕೆ 3 ನೇ ಆರೋಪಿಯು ರೈಲಿಗೆ ಸಿಕ್ಕಿ ಮೃತಪಟ್ಟಿರುತ್ತಾರೆ ಎಂದು ತಿಳಿಯಿತು.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

3. ನ್ಯಾಯಾಲಯದ ಮುಂದಿರುವ ಸೀರೆ ಹಾಗೂ ನಿಪಿ–5 ಫೋಟೋದಲ್ಲಿರುವ ಸೀರೆ ಬೇರೆ ಬೇರೆ ಅಲ್ಲ ಒಂದೇ ಎಂಬ ಸೂಚನೆಗೆ ಸಾಕ್ಷಿಯು ಸುಳ್ಳು ಫೋಟೋ ನಿಪಿ–5 ರಲ್ಲಿರುವ ಸೀರೆ ಹಾಗೂ ನ್ಯಾಯಾಲಯದ ಮುಂದಿರುವ ಸೀರೆ ಬೇರೆ ಬೇರೆ ಎಂದು ಹೇಳುತ್ತಾರೆ. ಆರೋಪಿತರು ನನ್ನ ತಂಗಿಗೆ ವರದಕ್ಷಿಣೆ ಕಿರುಕುಳ ನೀಡುತ್ತಿದ್ದು, ವರದಕ್ಷಿಣೆ ತರದಿದ್ದರೆ ಸತ್ತು ಹೋಗು ಎಂದು ಕಿರಕುಕುಳ ನೀಡಿದ್ದರಿಂದ ಮೃತಳು ಆರೋಪಿತರ ಹಿಂಸೆ ತಾಳಲಾರದೆ ಬೇಸತ್ತು ನೇಣು ಹಾಕಿಕೊಂಡು ಸತ್ತು ಹೋಗಿರುತ್ತಾಳೆ ಎಂಬ ಸೂಚನೆಗೆ ಸಾಕ್ಷಿಯು ಆ ರೀತಿ ಅಲ್ಲ ಆರೋಪಿತರೇ ಹೊಡೆದು ಸಾಯಿಸಿ ನೇಣು ಹಾಕಿರುತ್ತಾರೆಂದು ಹೇಳುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎನ್ ವಕೀಲರಿಂದಃ</u>**

4. ನನ್ನ ತಾಯಿ ತಂದೆಗೆ ನಾನು 4 ನೇ ಮಗಳು. ನನ್ನ ಮದುವೆಯಾಗುವುದಕ್ಕಿಂತ ಮೊದಲು ನನ್ನ ತಂಗಿ ಮೃತ ಚೈತ್ರ ರವರ ಮದುವೆ ಆಗಿರುತ್ತದೆ. ನನ್ನ ತಂಗಿ ಮೃತ ಚೈತ್ರ ಹಾಗೂ 1 ನೇ ಆರೋಪಿ ಒಬ್ಬರಿಗೊಬ್ಬರು ಇಷ್ಟಪಟ್ಟು ದೇವಸ್ಥಾನದಲ್ಲಿ ಮದುವೆಯಾಗಿದ್ದರು ಎಂದು ನನಗೆ ಗೊತ್ತಿಲ್ಲ, ಮದುವೆಯಾಗಿದ್ದರು ಆದರೆ ಎಲ್ಲಿ ಮದುವೆಯಾಗಿದ್ದರು ಎಂದು ನನಗೆ ಗೊತ್ತಿಲ್ಲ. ಮೃತಳ ಹಾಗೂ 1 ನೇ ಆರೋಪಿಯ ಮದುವೆಯನ್ನು ನಮ್ಮ ಮನೆಯವರು ಮಾಡಿರುವುದಿಲ್ಲ, ಬದಲಾಗಿ ಅವರೇ ಮಾಡಿಕೊಂಡಿರುತ್ತಾರೆ. ಮೃತಳ ಮತ್ತು 1 ನೇ ಆರೋಪಿಯ ಮದುವೆಗೆ ನಮ್ಮ ಮನೆಯವರು ಯಾರೂ ಹಾಗೂ ನಮ್ಮ ತಾಯಿ ತಂದೆಯವರೂ ಸಹ ಹೋಗಿರಲಿಲ್ಲ.

ನನ್ನ ತಾಯಿ ಹಾಗೂ ತಂದೆ ಸದರಿ ಮೃತಳ ಮದುವೆಗೆ ವಿರೋಧ ಮಾಡಿದ್ದ ಕಾರಣ ಹೋಗಿರುವುದಿಲ್ಲ ಎಂಬ ವಿಚಾರ ನನಗೆ ಗೊತ್ತಿರುವುದಿಲ್ಲ.

5. ನನ್ನ ಮದುವೆಗೆ 1 ನೇ ಆರೋಪಿ ನನ್ನ ತಂದೆಗೆ ಒಂದೂವರೆ ಲಕ್ಷ ರೂ. ಕೊಟ್ಟಿರಲಿಲ್ಲ. ನನ್ನ ತವರು ಮನೆಯಲ್ಲಿನ ಕೊಟ್ಟಿಗೆ ಬಿದ್ದು ಹೋದ ವಿಚಾರ ನನಗೆ ಗೊತ್ತಿತ್ತು. ಸದರಿ ಕೊಟ್ಟಿಗೆ ಸರಿಪಡಿಸಲು 1 ನೇ ಆರೋಪಿ 40 ಸಾವಿರ ರೂ. ಹಣವನ್ನು ನನ್ನ ತಂದೆಗೆ ಕೊಟ್ಟಿದ್ದ ಎಂದು ಸೂಚಿಸುವುದು ಸುಳ್ಳು, ಕೊಟ್ಟಿರುವುದಿಲ್ಲ. ನನ್ನ ಅಕ್ಕ ಮಮತಾ ರವರ ಗಂಡ ಜಯರಾಂ ಈಗಲೂ ಆರೋಪಿತರಿಗೆ ಸೇರಿದ ಕಾರನ್ನು ಇಟ್ಟುಕೊಂಡು ಓಡಿಸಿಕೊಂಡಿದ್ದಾರೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ಅಕ್ಕ ಮಮತಾ ಹಾಗೂ ಅವರ ಗಂಡ ಜಯರಾಂ ರವರ ಬಳಿ ಕಾರೇ ಇರುವುದಿಲ್ಲ.

6. ನಾನು ಅನುಗವಳ್ಳಿ ಗ್ರಾಮದಲ್ಲಿ ವಾಸ ಇದ್ದೇನೆ. ನನ್ನ ತಂಗಿ ಚೈತ್ರ ನೇಣು ಹಾಕಿಕೊಂಡಿದ್ದಾಳೆ ಬನ್ನಿ ಎಂದು 1 ನೇ ಆರೋಪಿ ನಮಗೆಲ್ಲಾ ಫೋನ್ ಮಾಡಿದ್ದನು. 1 ನೇ ಆರೋಪಿಯು ಬಾಸಾ–1, 2 ಹಾಗೂ ಬಾಸಾ–2 ರವರ ಗಂಡ ಜಯರಾಂ ಗೆ ಫೋನ್ ಮಾಡಿದ್ದನು. ಆ ಸಮಯದಲ್ಲಿ ನನಗೆ ಸಣ್ಣ ಮಗು ಇದ್ದು, ನನ್ನ ತವರು ಮನೆ ಕಿತ್ತನಕೆರೆಯಲ್ಲಿ ಇದ್ದೆನು. ನಾವು ಆರೋಪಿತರ ಮನೆಯ ಬಳಿಗೆ ಹೋದಾಗ ಬೆಳಿಗ್ಗೆ 8 ಗಂಟೆಯಾಗಿತ್ತು. ನಾವು ಹೋಗಿ ನೋಡಿದಾಗ ಮೃತ ಚೈತ್ರಳ ದೇಹ ನೇಣು ಬಿಗಿದ ಸ್ಥಿತಿಯಲ್ಲಿ ಇತ್ತು. ಮೃತ ಚೈತ್ರಳ ಕೆನ್ನೆಯ ಮೇಲೆ ಬರೆಗಳು ಮೂಡಿದ್ದವು. ಮೃತ ಚೈತ್ರಳ ಕೆನ್ನೆ ಮೇಲೆ ಬರೆಗಳು ಮೂಡಿದ್ದವು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಶವವನ್ನು ನಾವು ನೋಡಿದಾಗ ಸೀರೆಯ ಕುಣಿಕೆ ಸಂಪೂರ್ಣವಾಗಿ ಕೊರಳಿಗೆ ಹತ್ತಿರಲಿಲ್ಲ,

ಸಡಿಲವಾಗಿ ಇತ್ತು.

7. 1 ನೇ ಆರೋಪಿ ಹಾಗೂ ಮೃತಳ ನಡುವೆ ಅಸಮಾಧಾನ ಇದ್ದ ಬಗ್ಗೆ ಘಟನೆಗಿಂತ ಮೊದಲು ಪೊಲೀಸ್ ಠಾಣೆಗೆ ಹೋಗಿರಲಿಲ್ಲ ಹಾಗೂ ದೂರನ್ನು ನೀಡಿರುವುದಿಲ್ಲ. ಮೃತಳಿಗೆ ಆರೋಗ್ಯ ಸರಿ ಇಲ್ಲದೇ ಇದ್ದಾಗ ಆಕೆಯನ್ನು 1 ನೇ ಆರೋಪಿ ಚಿಕಿತ್ಸೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರಲಿಲ್ಲ. ಮೃತಳು ಮಹಾಲಯ ಅಮವಾಸ್ಯೆಗಿಂತ 15 ದಿನ ಮೊದಲು ತವರು ಮನೆಗೆ ಬಂದಿದ್ದು ಅದಕ್ಕಿಂತ ಮೊದಲು ಅಂದರೆ ತವರು ಮನೆಗೆ ಬರುವುದಕ್ಕಿಂತ ಮೊದಲು 1 ನೇ ಆರೋಪಿಯೊಂದಿಗೆ ಆತನ ಜೊತೆಯಲ್ಲಿ ಆಂಧ್ರದಲ್ಲಿ ವಾಸವಾಗಿದ್ದಳು. ನನ್ನ ತಾಯಿ ಚಾಸಾ–1 ರವರ ಬಳಿ ಮೊಬೈಲ್ ಫೋನ್ 20 ವರ್ಷಗಳಿಂದಲೂ ಇದೆ. ನನ್ನ ತಾಯಿ ಬಳಿ 20 ವರ್ಷಗಳಿಂದ ಮೊಬೈಲ್ ಫೋನ್ ಇಲ್ಲದೇ ಇದ್ದರೂ ಇತ್ತು ಎಂದು ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮೃತಳ ಬಳಿ ಮೊಬೈಲ್ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಮನೆಯಲ್ಲಿದ್ದ ಮೊಬೈಲ್ ಫೋನನ್ನು ತೆಗೆದುಕೊಂಡು ಹೋಗಿದ್ದಳು. ಮೃತಳು ನಮ್ಮ ಅಕ್ಕ ಚಾಸಾ–18 ರವರಿಗೆ ಫೋನ್ ಮಾಡಿ ಪೂಜೆ ಮಾಡಲು ಬಿಡುತ್ತಿಲ್ಲ ಎಂದು ತಿಳಿಸಿದಳು. ನಂತರ ಸದರಿ ವಿಚಾರವನ್ನು ಚಾಸಾ–18 ರವರು ನಮಗೆ ತಿಳಿಸಿರುತ್ತಾಳೆ. ವರದಕ್ಷಿಣೆ ಕಿರುಕುಳ ನೀಡುತ್ತಿದ್ದ ಬಗ್ಗೆ ಚಾಸಾ–1 ರವರು ನೇರವಾಗಿ ನನಗೆ ಹೇಳಿರುವುದಿಲ್ಲ, ಬದಲಾಗಿ ನಮ್ಮ ಅಕ್ಕ ಚಾಸಾ–18 ರವರಿಗೆ ಫೋನ್ ಮೂಲಕ ಹೇಳಿರುತ್ತಾಳೆ. ಆರೋಪಿ–1 ಮತ್ತು 2 ರವರು ಸ್ವಂತ ನಮ್ಮ ಸೋದರ ಮಾವನ ಮಕ್ಕಳು. 3 ನೇ ಆರೋಪಿ ನಮ್ಮ ಸ್ವಂತ ಸೋದರ ಮಾವ. ಘಟನೆಯಾದ 3 ದಿನಕ್ಕೆ 3 ನೇ ಆರೋಪಿ ರೈಲಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ

ಎಂಬ ಸೂಚನೆಗೆ ಸಾಕ್ಷಿಯು ಹಳೇಬೀಡು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಹೇಳಿದರು ಎಂದು ಹೇಳುತ್ತಾರೆ. 3 ನೇ ಆರೋಪಿ ಯಾವ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಂಡರು ಎಂಬ ವಿಚಾರ ನನಗೆ ಗೊತ್ತಿಲ್ಲ. ಸ್ವಂತ ನನ್ನ ತಂಗಿ ಚಾಸಾ-1 ಸುಮ್ಮನೆ ನನ್ನ ಹಾಗೂ ನನ್ನ ಮಕ್ಕಳ ವಿರುದ್ಧ ದೂರು ನೀಡಿದ್ದಾಳೆ ಎಂದು ಮನನೊಂದು 3 ನೇ ಆರೋಪಿಯು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. 1 ನೇ ಆರೋಪಿ ಹಾಗೂ ಮೃತಳ ಮಗನನ್ನು ನನ್ನ ಅಕ್ಕ ಚಾಸಾ-2 ಮಮತಾ ಸಾಕಿಕೊಂಡಿದ್ದಾರೆಂದರೆ ಸರಿ.

8. ನನ್ನ ತಂಗಿ ಚೈತ್ರ ಮೃತಪಡುವುದಕ್ಕಿಂತ ಮೊದಲು ಪತ್ರ ಏನಾದರೂ ಬರೆದಿಟ್ಟಿದ್ದಳಾ ಎಂಬ ಪ್ರಶ್ನೆಗೆ ಸಾಕ್ಷಿಯು ಮೃತಳು ಬರೆದಿದ್ದ ಒಂದು ಚೀಟಿಯನ್ನು ನಾವು ಹಳೇಬೀಡು ಪೊಲೀಸರಿಗೆ ನಾವು ಕೊಟ್ಟಿದ್ದೆವು ಎಂದು ಹೇಳುತ್ತಾರೆ. ಆ ರೀತಿ ಮೃತಳು ಯಾವುದೇ ಚೀಟಿ ಬರೆಯದೇ ಇದ್ದರೂ ಸಹ ನಾವೇ ಸೃಷ್ಟಿ ಮಾಡಿ ಬರೆದಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳಿದ್ದೇನೆಂದರೆ ಸರಿಯಲ್ಲ. ಆರೋಪಿ-1 ಮತ್ತು ಚೈತ್ರಳು ಮಾಡಿಕೊಂಡ ವಿವಾಹ ನಮಗೆ ಇಷ್ಟ ಇಲ್ಲದೆ ಇದ್ದ ಕಾರಣ ನ್ಯಾಯಾಲಯದ ಮುಂದೆ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಪೊಲೀಸರಿಗೆ ಘಟನೆ ದಿನದಂದೇ ಹೇಳಿಕೆಯನ್ನು ನೀಡಿರುತ್ತೇನೆ. ಆ ದಿನ ಹೊರತುಪಡಿಸಿ ಎಂದಿಗೂ ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಆರೋಪಿತರು ಯಾರೂ ಮೃತಳಿಗೆ ವರದಕ್ಷಿಣೆ ಹಿಂಸೆ ನೀಡಿರುವುದಿಲ್ಲ, ಆದರೂ ಸಹ ಮೃತಳು ಅನಾರೋಗ್ಯದಿಂದ ಬಳಲುತ್ತಿದ್ದು, ಕಾರಣ ಸದರಿ ಕಾಯಿಲೆಯಿಂದ ಬಂದಂತಹ ನೋವನ್ನು ಭರಿಸದೆ ಹಾಗೂ ಕಾಯಿಲೆಯಿಂದ

ಬಳಲುತ್ತಿದ್ದರಿಂದ ಆಕೆಯೇ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ಸೂಚಿಸುವುದು ಸುಳ್ಳು. ಹಬ್ಬದ ದಿನ ನನ್ನ ತಂಗಿ ಪೂಜೆ ಮಾಡಲು ಬಿಡುತ್ತಿಲ್ಲ ಎಂದು ನನ್ನ ತಂಗಿ ಚೈತ್ರ ತಿಳಿಸಿದಳು ಎಂದು ಸುಳ್ಳು ಸಾಕ್ಷ್ಯ ಹೇಳಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿ ನೀಡಿರುವ ದೂರಿಗೆ ಅನುಕೂಲ ಆಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ01.10.2019 ರಂದು ನಾನು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.